# ಭರತಖಂಡ–ಬದನಿಕಾಯಿ

ಬದುಕಿನ ಎಲ್ಲ ಸಂದರ್ಭಗಳಿಗೆ 'ಮಾತು' ಒದಗಿಸುವ ಬರಹಗಾರ ಎನ್ನುವ ಅಗ್ಗಳಿಕೆಯ ಶೇಕ್ಸ್‌ಪಿಯರ್ ಕುರಿತು, 'Shakespeare for all occasions' ಎನ್ನುವ ಮಾತು ಇಂಗ್ಲಿಷ್ ಸಾಹಿತ್ಯದಲ್ಲಿ ಜನಪ್ರಿಯ. ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಈ ಮಾತನ್ನು ಅನ್ವಯಿಸಬಹುದಾದ ಕವಿಗಳಲ್ಲೊಬ್ಬರು ದ.ರಾ. ಬೇಂದ್ರೆ. 'ಬೇಂದ್ರೆ ಫಾರ್ ಆಲ್ ಅಕೇಷನ್ಸ್' ಎನ್ನುವುದು ಬರಿಯ ವಿಶೇಷಣವಲ್ಲ; ಅನುಭವಿಸಿಯೇ ಅರಿಯಬೇಕಾದ ಬೆರಗು. ಒಲವು–ಸಾವು, ಸುಗ್ಗಿ–ಹಸಿವು ಸೇರಿದಂತೆ ಯಾವುದೇ ಸಂದರ್ಭಕ್ಕೆ ಹೊಂದುವ ಮಾತು ವರಕವಿಯ ಕಾವ್ಯದಲ್ಲಿ ಲಭ್ಯ. ಹುಡುಕುವ ವ್ಯವಧಾನ ಬೇಕಷ್ಟೇ. ಪ್ರಸಕ್ತ ಚುನಾವಣಾ ರಾಜಕಾರಣಕ್ಕೂ ಬೇಂದ್ರೆಯವರ ಕಾವ್ಯದಲ್ಲಿ ಕನ್ನಡಿಯಿದೆ. 'ಭರತಖಂಡ – ಬದನಿಕಾಯಿ' ಶೀರ್ಷಿಕೆಯ ಕವಿತೆ, ಈ ಹೊತ್ತಿನ–ಬಹುಶಃ ಎಲ್ಲ ಕಾಲದ– ಚುನಾವಣಾ ರಾಜಕಾರಣವನ್ನು ವ್ಯಂಗ್ಯ ಮತ್ತು ವಿಷಾದದಿಂದ ಚಿತ್ರಿಸುತ್ತಿದೆ.

ಕವಿತೆ ಆರಂಭವಾಗುವುದೇ, ಕಲಹ ಬೇಡ, ಒಮ್ಮನವಿರಲಿ ಎನ್ನುವ ಕಳಕಳಿಯೊಂದಿಗೆ. 'ಭರತಖಂಡ ಬದನಿಕಾಯಿ/ ಭರಿತ ಮಾಡ ಬ್ಯಾಡಾ ತಮ್ಮಾ!/ ಸುರತದ ಕಲಹಾ ಮೆತ್ತ ಬ್ಯಾಡಾ/ ಒಮ್ಮನ ಇರಲಿ ನಮ್ಮಾ, ನಿಮ್ಮಾ' ಎನ್ನುತ್ತಾರೆ ಕವಿ. ಭರತಖಂಡ ಬದನಿಕಾಯಿ ಎನ್ನುವ ಮಾತು ವ್ಯಂಗ್ಯದ್ದೂ ಹೌದು, ವಿಷಾದದ್ದೂ ಹೌದು. ದೇಶದ ಬಗ್ಗೆ ಭಾವುಕವಾಗಿ ಮಾತನಾಡುತ್ತೇವೆ; ಮಾತಿನ ಉತ್ಸಾಹ ಕೃತಿಯಲ್ಲಿ ಕಾಣಿಸುವುದಿಲ್ಲ. 'ಹೇಳೋದು ಆಚಾರ, ತಿನ್ನೋದು ಬದನೆಕಾಯಿ' ಎನ್ನುವ ಮಾತಿಗೆ ತಕ್ಕಂತೆ ನಮ್ಮ ಮಾತು–ಕೃತಿಯ ನಂಟು.

ಲಜ್ಜೆ ಹಾಗೂ ನೈತಿಕತೆಗೆ ತಿಲಾಂಜಲಿ ನೀಡಿರುವ ರಾಜಕೀಯ ಸನ್ನಿವೇಶ ಇಂದಿನದು. ಭ್ರಷ್ಟಾಚಾರದೊಂದಿಗೆ ಲೈಂಗಿಕ ಹಗರಣಗಳೂ ಸುದ್ದಿಯಾಗುವುದು ಸಹಜ ಎನ್ನುವಂಥ ದಿನಗಳಿವು.

ದೊಡ್ಡ ದೊಡ್ಡ ಮಾತನಾಡುತ್ತಲೇ ಲೂಟಿ ಮಾಡುವ ಕಲೆಯಲ್ಲಿ ರಾಜಕಾರಣಿಗಳು ತಮ್ಮ ಪೂರ್ವಸೂರಿಗಳನ್ನು ನಾಚಿಸುವಂತಿದ್ದಾರೆ. ಜನಹಿತದ ಕಾಳಜಿಯನ್ನು ಮರೆತವರು, ರಾಜಕಾರಣ ಮತ್ತು ಧರ್ಮದ ನಡುವಣ ಗೆರೆಯನ್ನು ಅಳಿಸಿಹೋಗಲು ಕಾರಣವಾಗಿದ್ದಾರೆ. ಈ ಬೆಳವಣಿಗೆಯನ್ನು ಬೇಂದ್ರೆ ಬಹು ಮಾರ್ಮಿಕವಾಗಿ ಕಟ್ಟಿಕೊಟ್ಟಿದ್ದಾರೆ:

ಶಿಲಾಶಾಸನಾ ಥಾಲು ಮಾಡಿ  
'ಲೂಟಿ' ನಡಿಸಿದ್ಯಲ್ಲೋ ಖೋಡಿ !  
ಮಂದಿರದಾಗ ಹೊಕ್ಕಿ ಯಾಕ?  
ಮೂರ್ತಿ ಮಾರಾಕ!  
ಕರೇ ಮಾರಿಗೂ, ಬಿಳೇ ಮಾರಿಗೂ ಏನ್ ಫರಕs?  
ದುಡ್ಡು ದೊಡ್ಡಸ್ತಕೀs ಬೆನ್ನು  
ಹಿಡಿದು ಹಾಳಾದಿ ನೀನು.  
ಹರೇದ ಹುಡುಗರ ತಲೀ ಕೆಡಿಸಿ  
ಮಾಡಾವಾ ಏನು?

ಈ ಪದ್ಯಭಾಗಗಳನ್ನು ವಿಶ್ಲೇಷಿಸುವ ಅಗತ್ಯವೇ ಇಲ್ಲ. 'ಮಂದಿರದಾಗ ಹೊಕ್ಕಿ ಯಾಕ?' ಎನ್ನುವ ಪ್ರಶ್ನೆ ಈ ಹೊತ್ತಿನ ರಾಜಕಾರಣಿಗಳನ್ನು ಸ್ವಲ್ಪವೂ ವಿಚಲಿತಗೊಳಿಸುವುದಿಲ್ಲ. ಮಂದಿರವೇ ರಾಜಕಾರಣದ ಕೇಂದ್ರವಾಗಿರುವಾಗ, ಅಲ್ಲಿ ಹೊಗದೆ ಇನ್ನೆಲ್ಲಿ ಹೊಗುವುದು? ಹಣದ ಮದ ಹಾಗೂ ಅಧಿಕಾರದ ಧಿಮಾಕು – ಎರಡೂ ಸೇರಿಕೊಂಡರೆ 'ಕುರುಡು ಕಾಂಚಾಣ' ತಾನೆ? ಇದರ ಕುಣಿತ ಹರೆಯದ ಹುಡುಗರ ವಿಚಾರಶಕ್ತಿಯನ್ನು ನಷ್ಟಗೊಳಿಸಿ ಅವರನ್ನು ಭ್ರಷ್ಟರನ್ನಾಗಿಸುತ್ತಿದೆ; ದೈನಂದಿನ ತವಕ ತಲ್ಲಣಗಳನ್ನು ಪಕ್ಕಕ್ಕೆ ಸರಿಸಿ, ಯಾವುದೋ ಅಮಲಿನಲ್ಲಿ ಯುವಜನರನ್ನು ಮೈಮರೆಸಲಾಗುತ್ತಿದೆ.

ಕವಿತೆ ಮುಂದುವರೆಯುವುದು – 'ಬರೇ ಮಾತಿನ್ಯಾವಾ ನೀನು/ ಖರೇ ಮಾತು ನಿನಗ್ಯಾಕ?/ ಪಂಚಮಸ್ತಂಭದ ಮಂದಿ ಇಂದ/ ಸುತ್ತ ತುಂಬ್ಯಾರ!' ಎನ್ನುವ ಚಿತ್ರದೊಂದಿಗೆ; ಪರಾಕುಭಟ್ಟರ ಒಡ್ಡೋಲಗದಲ್ಲಿ ವಾಸ್ತವದ ಖರೆ ಮಾತಿಗೆ ಅವಕಾಶವಾದರೂ ಎಲ್ಲಿ ಎನ್ನುವ ಜಿಜ್ಞಾಸೆಯೊಂದಿಗೆ.

ವರ್ತಮಾನದ ಬಿಕ್ಕಟ್ಟುಗಳಿಗೆ ಮುಖಾಮುಖಿ ಸಾಧ್ಯವಾಗದೆ ಹೋದಾಗ, ಭೂತಕಾಲದ ಆಳದಿಂದ ಯಾವಯಾವುದೋ ಬಿಂಬಗಳನ್ನು ಹೊರಗೆ ತೆಗೆದು ಚಲಾವಣೆಗೆ ತರಲಾಗುತ್ತದೆ. ಈ ಬಿಂಬಗಳು ಸಮಾಜದಲ್ಲಿ ಒಡಕುಂಟು ಮಾಡುತ್ತ, ಹೊಸ ಬಿಕ್ಕಟ್ಟುಗಳನ್ನು ಸೃಷ್ಟಿಸುತ್ತವೆ. ಈ ಹೊತ್ತಿನ 'ಯಶಸ್ವಿ ರಾಜಕಾರಣಿ'ಗೆ ಸಮಸ್ಯೆಗಳನ್ನು ಬಗೆಹರಿಸುವುದರಲ್ಲಿ ಆಸಕ್ತಿಯಿಲ್ಲ; ಇರುವ ಬಿಕ್ಕಟ್ಟುಗಳನ್ನು ಮತ್ತಷ್ಟು ಹೆಚ್ಚಿಸಿದಷ್ಟೂ ಅವನ ಕಿಮ್ಮತ್ತು ಹೆಚ್ಚುತ್ತಾ ಹೋಗುತ್ತದೆ. ಈ ವಿಪರ್ಯಾಸವನ್ನು ಕವಿ ಕಟ್ಟಿಕೊಟ್ಟಿರುವುದು ಹೀಗೆ:

ಭಾವೀ ತೋಡಿ ಬೇತಾಳ ತಗದಿ  
ಅದರ ತಗಾದಿ, ತಾಳತೀ ಹ್ಯಾಂಗ?  
ಹಾಂಗs ಮಾಡು, ಹೀಂಗs ಮಾಡು  
ಇರತsದದು ಸಾಯದಾಂಗ!

ಈ ಬೇತಾಳವನ್ನು ಸಾಕುವವರು, 'ಮುಟ್ಟಲ ಮುರಕೀಯಂಥಾ ಮಂದಿ' ಮುಂದೆ ಬಂದಿರುವುದಾದರೂ ಹೇಗೆ? 'ಮಂದೀನ್ನ ತುಳತುಳದು ಮುಂದೆ ಬಂದಾರ' ಎನ್ನುತ್ತಾರೆ ಕವಿ. 'ಏನು ತಿಂತಾರೋ ಹ್ಯಾಂಗ ಇರತಾರೋ/ ಅವರ ಬಾಳೇ ಅವರಿಗೆ ಗೊತ್ತು/ ಮಂದಿ ಬದುಕು ಹಾಳ್ ಮಾಡ್ತಾರ' ಎಂದು ಈ ಮಂದಿಯ ಮನೆಮುರುಕತನವನ್ನು ಕವಿ ಸ್ಪಷ್ಟವಾಗಿ ಗುರ್ತಿಸುತ್ತಾರೆ.

ಸಮಾಜದಲ್ಲಿ ಅಶಾಂತಿ ಉಂಟುಮಾಡುವ ಜನ 'ನಾಡು–ನುಡಿ–ಸಂಸ್ಕೃತಿ' ಎಂದು ಸೋಗಿನ ಮಾತುಗಳಾಡುವುದನ್ನೂ ಕವಿ ಛೇಡಿಸುತ್ತಾರೆ; 'ನಾಡ ಅಂತ ನುಡಿ ಅಂತs ದಲ್ಲಾಳಿ ನಡಿಸ್ಯಾರ/ ಇವರ ಕೃತಿ 'ಸಂಸ್ಕೃತಿ' ಅಲ್ಲಾ ವಿಕೃತಿ' ಎನ್ನುತ್ತಾರೆ.

'ಭರತಖಂಡ – ಬದನಿಕಾಯಿ' ಕವಿತೆ ಕೊನೆಗೊಳ್ಳುವುದು ಹೀಗೆ:

ಇವರs ಧರ್ಮಕ್ಷೇತ್ರಾ, ಕುರುಕ್ಷೇತ್ರಾ ಮಾಡ್ಯಾರ  
ತಮ್ಮ ಪಾರ್ಟಿ, ತಮ್ಮ ಬಡೇ ಜಾವು.  
ತಮ್ಮ ಖರ್ಚಿ, ತಮ್ಮ ಖುಷಿ  
ಯುದ್ಧಾ ಮಾಡೋದಾಗಲೇ ಇಲ್ಲಾ  
ಬುದ್ಧನ ವಚನ ಹೇಳ್ತಾರ!  
ಇವರs ಬುದ್ಧ ಆದರs  
ನಿದ್ದಿ ಮಾಡಾವರ್‍ಯಾರು?  
ಎಚ್ಚರ ಇದ್ದವರ್‍ಯಾರು?  
ಹುಚ್ಚುಚ್ಚು ಬಡೀತಾರು!

ತೀಕ್ಷ್ಣ ವ್ಯಂಗ್ಯ ಹಾಗೂ ತೀವ್ರ ವಿಷಾದದ, ದಶಕಗಳ ಹಿಂದಿನ 'ಭರತಖಂಡ – ಬದನಿಕಾಯಿ' ಕವಿತೆ ಈ ಹೊತ್ತಿನದೇ ಕವಿತೆ ಎನ್ನುವಂತಿದೆ. ಒಂದು ಒಳ್ಳೆಯ ಕವಿತೆ ಎಲ್ಲ ಕಾಲಕ್ಕೂ ಪ್ರಸ್ತುತ ಎನ್ನುವುದು ನಿಜವೇ ಆದರೂ, ರಾಜಕಾರಣದ ದುಸ್ಥಿತಿಯ ನಿರಂತರತೆ ನೋವು ತರುವಂತಹದ್ದು.

■ **ಚಂಪಕಮಾಲಾ**

## ಮಾತೇ ಮುತ್ತು

- ಶತ್ರುಗಳನ್ನು ಕಡಿಮೆ ಮಾಡಿಕೊಳ್ಳುವ ಉತ್ತಮ ವಿಧಾನ ಎಂದರೆ ಅವರೊಂದಿಗೆ ಸ್ನೇಹ ಬೆಳೆಸುವುದು.  
  —ಅಬ್ರಹಾಂ ಲಿಂಕನ್
- ಬಂಧಿತನಾದ ದೇವರೇ ಮನುಷ್ಯ; ಬಂಧನದಿಂದ ಬಿಡಿಸಿಕೊಂಡ ಮನುಷ್ಯನೇ ದೇವರು.  
  —ರಾಮಕೃಷ್ಣ ಪರಮಹಂಸ
- ಸತ್ಯಕ್ಕಾಗಿ ಯಾವುದನ್ನಾದರೂ ತ್ಯಾಗ ಮಾಡಿ. ಆದರೆ ಸತ್ಯವನ್ನು ಮಾತ್ರ ತ್ಯಾಗ ಮಾಡಬೇಡಿ.  
  —ಸ್ವಾಮಿ ವಿವೇಕಾನಂದ
- ಲೋಕದಲ್ಲಿ ಯಾರೂ ಪೂರ್ಣ ಸುಖಿಯೂ ಅಲ್ಲ. ಪೂರ್ಣ ದುಃಖಿಯೂ ಅಲ್ಲ.  
  —ಗೌತಮ ಬುದ್ಧ
- ಸದ್ಗುಣ ಮತ್ತು ದುರ್ಗುಣಗಳ ವ್ಯತ್ಯಾಸ ತಿಳಿಯದಾದಾಗ ನಮ್ಮ ಬೆಳವಣಿಗೆ ನಿಲ್ಲುತ್ತದೆ.  
  —ಮಹಾತ್ಮ ಗಾಂಧಿ
- ಆಸೆಗಾಳಾದವನು ಲೋಕಕ್ಕೆ ಆಳು, ಆಸೆಯನ್ನಾಳುವಗೆ ಲೋಕವೇ ಆಳು.  
  —ಸುಭಾಷಿತ
- ಪ್ರೀತಿಯನ್ನು ಯಾರು ಬಯಸುತ್ತಾರೋ, ಅವರು ಮೊದಲು ಪ್ರೀತಿಯನ್ನು ನೀಡಬೇಕು.  
  —ಕಬೀರ
- ತನುವಿನ ಕೋಪ ತನ್ನ ಹಿರಿತನದ ಕೇಡು, ಮನದ ಕೋಪ ತನ್ನ ಅರಿವಿನ ಕೇಡು.  
  —ಬಸವಣ್ಣ